
ಅಂತವ ತನ್ನ ಸೈಕಾಲಜಿ ಮೈಂಡ್ ಬಳಸಿ, 'ಅಲ್ಲ ಸರ್, ಹಾಗಾದರೆ ಆ ಹೆಣ್ಣುಮಗಳು ಮಾಡ್ತಿರೋ ಆಪಾದನೆಯೇ ಸುಳ್ಳಾ... ಅವರು ದಾಖಲೆ ಇದೆ ಅಂತ ಹೇಳ್ತಿದ್ದಾರೆ...' ಧಾಖಲೆ.. ಧಾಖಲೆ ಅಂತ ಮಹಾ ಪ್ರಾಣದಲ್ಲೇ ಹೇಳಿದಳು.

'ಅಮ್ಮಿಕ್ಕಂಡಿರಮ್ಮಿ, ಅವಳು ಹೇಳೀಲು ಅಂತ ನೀನು ಕೇಳ್ಕಂಡ್ ಬಂದ್ಬಿಡು. ನೀವ್ ಎಷ್ಟು ಅರಚಾಡಿರೂ ನನ್ ಒಂದ್ ಡ್ಯಾಶ್‌ನೂ ಕಿತ್ಕಣಕಾಗಲ್ಲ, ನಮ್ಮೊನ್..' ಎನ್ನುವ ಮಾತು ನಾಗರಾಜರ ನಾಲಿಗೆ ಮೇಲೆ ಬಂತಾದರೂ ಟೀವಿಯವರ ಸಹವಾಸ ಒಳ್ಳೇದಲ್ಲ ಅಂತ ಅವರೇ ಅಮ್ಮಿಕ್ಕಂಡು ಸಮಾಧಾನಿಯಾಗಿ 'ನೋಡಮ್ಮ, ನಾನು ಅವಳ ರೂಮಿಗೆ ಹೋಗಿದ್ದು ನಿಜ. ಆದ್ರೆ ಪಿಎಚ್.ಡಿ ವಿಷಯದ ಬಗ್ಗೆ ಚರ್ಚಿಸಲು ಹೋಗಿದ್ದೆನೇ ಹೊರತು ಮತ್ತೇನೂ ಇಲ್ಲ. ಆ ಹುಡುಗಿ ಮಾಡ್ತಿರೋ ಅಪವಾದದಲ್ಲಿ ಯಾವುದೇ ಹುರುಳಿಲ್ಲ. ನನಗೆ ಹೆಣ್ಣುಮಕ್ಕಳ ಮೇಲೆ ಅಪಾರ ಗೌರ್ವ. ನಾನೂ ನನ್ನೆಂಡ್ರು ಇಬ್ರೂ ಎಕ್ಸ್‌ಪೈರ್ಡ್ ವಿಷಯ ವಿಜ್ಞಾನಿಗಳು, ಸ್ತ್ರೀವಾದಿಗಳು, ಯಡಾಂಬ ಕೋಟಾ ಅಂತಲೇ ಜಿಲ್ಲೆ ತುಂಬಾ ಫೇಮಸ್ ಆಗಿದ್ದೀವಿ. ರೇಖಾ ಹೇಳ್ತಾ ಇರೋ ತರ ಏನೂ ಆಗಿಲ್ಲ. ನನ್ ಸಿಸ್ಯ ಶೇಖರಿ ಇರೋವಾಗ ನಾನ್ಯಾಕೆ ಬ್ಯಾರೆ ಕಡಿಕೆ ಹೋಗ್ಲಿ! ನಾನು ಹೇಳ್ತಿರೋದು ನಿಮ್ಮವ್ವನ ಸತ್ವಾಗ್ಲು ದಿಟ... ದಿಟ... ದಿಟ...' ಅಂದು ಕಾಲ್ ಕಟ್ ಮಾಡಿದರು.



ಈ ಮಾತು ಕೇಳಿಸಿಕೊಂಡಿದ್ದೇ ತಡ. ಈವರೆಗೆ ಓಡುತ್ತಿದ್ದ 'ಕುಡಿದು ಕ್ಯಾಂಪಸ್‌ನಲ್ಲೇ ನೃತ್ಯ', 'ಫುಲ್ ಚಿತ್ ಪ್ರಾಧ್ಯಾಪಕ', 'ಡಾ. ನಾಗರಾಜರ ನಾಗಿಣಿ ಡ್ಯಾನ್ಸ್', ಇತ್ಯಾದಿಗಳು ಮಾಯವಾಗಿ 'ಡಾ. ನಾಗರಾಜರ ಡ್ಯಾನ್ಸ್ ಪ್ರಕರಣದಲ್ಲಿ ಬಿಗ್ ಟ್ವಿಸ್ಟ್', 'ಸಂಶೋಧನಾ ವಿದ್ಯಾರ್ಥಿಯೊಂದಿಗೆ ಅಸಭ್ಯ ವರ್ತನೆ?', ವಿಶ್ವವಿದ್ಯಾನಿಲಯದಲ್ಲಿ 'ನಾಗರಾಜನ' ಉಪಟಳ!', 'ನಾಟಿ ಪ್ರೊಫೆಸರ್ ನಾಗರಾಜ – ನೇಟೀವ್ ಸ್ಟೂಡೆಂಟ್ ಶೇಖರಿ!' ಇತ್ಯಾದಿ ಫ್ಲಾಶ್ ಅಂಡ್ ಬ್ರೇಕಿಂಗ್ ನ್ಯೂಸ್‌ಗಳು ಎಲ್ಲಾ ಚಾನೆಲ್ಲಿನಲ್ಲೂ ಲೀಡಿಂಗ್‌ನಲ್ಲಿ ಬಂದವು.

ಮನೆಯಲ್ಲಿ ಚಿಂತಾಕ್ರಾಂತಿ ಟೀವಿ ನೋಡ್ಕಂಡು ಕುಂತಿದ್ದ ಸಿಸ್ಯ ಶೇಖರಿಗೆ ಆಂಕರಮ್ಮನ ದನಿ ಜೋರಾದಂತೆಲ್ಲಾ ಬಿ.ಪಿ. ಏರುತ್ತಲೇ ಇತ್ತು. ಆಂಕರಮ್ಮನ ಮಾತಿನ ಮೋಡಿಯಲ್ಲಿ ಸಿಕ್ಕಿ ಇಷ್ಟು ವರ್ಷದಿಂದ ಕಾಪಾಡಿಕೊಂಡು ಬಂದಿದ್ದ ಗುಟ್ಟನ್ನು ಲೈವ್‌ನಲ್ಲಿ ಬಿಚ್ಚಿಟ್ಟು ಮರದ ಸೀಳಿನಲ್ಲಿ ಡ್ಯಾಶ್ ಅನ್ನು ಸಿಗಾಕಿಸಿಕೊಂಡ ಕರಡಿಯಂತಾದ ತನ್ನ ಗುರುವಿನ ಮೂರ್ಖತನವನ್ನು ಕಂಡು ಮೈಯೆಲ್ಲಾ ಉರಿದು ಹೋಗಿ ಫೋನಿನಿಂದ ಚಾರ್ಜರ್ ಕಿತ್ತವನೇ ಫೋನಚ್ಚಿದ.

ಫೋನ್ ತೆಗೆದ ನಾಗರಾಜರು 'ಹೇಳ್ಲ, ಎಲ್ಲಾ ಹೇಳಿದಿನಿ ಬಿಡು. ಆ ಯಮ್ಮ ಸುಳ್ಳು ಹೇಳ್ತಾವ್ಳೆ ಅಂತವ ಹೇಳಿದಿನಿ. ಏನು ಆಗಲ್ಲ, ನೀನು ಹೆದ್ರುಬೇಡ, ನಾನೆಲ್ಲಾ ಮೇನ್ಟೇನ್ ಮಾಡಿದಿನಿ' ಅಂದಾಗ 'ನಮ್ಮನ್, ನಾ ಹೇಳಿದ್ದೆ ತಾನೆ ಫೋನ್ ತೆಗಿಬೇಡ ಕಣಯ್ಯ ಗಾಂಫ, ನಾನೇ ಮಾಡ್ತೀನಿ ಅಂತ. ಲೇ... ಯಡಾಂಬ ಇದು ರೇಖಾ ಕೇಸೂ ಅಲ್ಲ, ನಂದೂ ನಿಂದೂ ಅಲ್ಲ ಕಣಯ್ಯ. ನೀನು ಸಂಜೆ ಡ್ಯಾನ್ಸ್ ಮಾಡಿದ್ದಲ್ಲ ಅದು ಕಣಯ್ಯ ಮ್ಯಾಟ್ರು. ಯಾರೋ ಅದನ್ನ ರೆಕಾರ್ಡ್ ಮಾಡಿ ಟೀವಿಯೋರಿಗೆ ಕಳಿಸಿಬಿಟ್ಟವರೆ, ಕುಡಿದು ಬಂದು ಕುಣಿದಿರೋದು ಅಂತ ಸುದ್ದಿ ಆಗ್ತಿತ್ತು. ಅದನ್ನ ಕೇಳೋಕೆ ಆಂಕರಮ್ಮ ಫೋನ್ ಮಾಡಿರೆ ನಿನ್ ಜಾತಕ ನೀನೇ ಬಿಚ್ಚಿಟ್ಟಲ್ಲಯ್ಯ ಥೂ ನಿನ್ ಮಕಸುಡ, ಕಳ್ಳನ ಮನ್ಸು ಉಳ್ ಉಳ್‌ಗೆ ಅನ್ನಂಗೆ ರೇಖಾ ವಿಷ್ಯನೂ ನೀನೇ ಹೇಳ್ಬಿಟ್ಟಲ್ಲಯ್ಯಾ... ನಮ್ಮೊ...' ಎಂದು ಬಾಯ್ತೆಗೆದು ವರಾಕ್ಕೊನ್ನೊಂದು ಶುರು ಮಾಡ್ಕೋಬೇಕು ಎನ್ನುವಾಗಲೇ ಶೇಖರಿಯ ಫೋನ್ ತಿರುಗಾ ಸ್ವಿಚ್ ಆಫ್ ಆಯ್ತು.

ಉಗುರಲ್ಲಿ ಹೋಗ್ತಿದ್ದ ಕೆಲಸನಾ ಸರಿಯಾಗಿ ತಿಳಕಂದೆ ಇಂಥಾ ಎಡವಟ್ಟು ಮಾಡಿಬಿಟ್ಟನಲ್ಲ. ನಮ್ಮವ್ವ ನನ್ನ ಹೆತ್ತು ಮರಕ್ಕೆ ಹಾಕಿದಾಗಿಂದ ಎಲ್ಲಾನು ಜನರ ಕಣ್ಣು-ಬಾಯಿಗೆ ಬರದಂಗೆ ಮಾಡ್ಕಂಡು ಬತ್ತಿದ್ದೋನು ಇಂಗೆ ಎಡವಿ ಬಿಟ್ನಲ್ಲ ಅಂತವ ಕಾರೊಳಗೇ ಮಂಡಿ ಸವರಿಕಂತಿದ್ದ ಕುದುರೆ ನಾಗರಾಜರು ಮಂಡಿ ಚಿಪ್ಪಿಗೊಂದೇಟು ಹೊಡೆದುಕೊಂಡು 'ನಮ್ಮೊನ್...' ಅಂದರು. ಹ್ಯಾಂಡ್ ಬ್ರೇಕ್ ಹಿಡಿದು ರೆಡ್ ಕಾರಿನೊಳಗೆ ಅತ್ತ-ಇತ್ತ ಮಾಗಾಡುತ್ತಾ ಬುಸುಗುಡುತ್ತಿದ್ದರು. ●